ಅಜಸ್ರಂ ಜಾಗರಣೀಯಂ ಲೋಕಹಿತಂ ಖಲು ಕರಣೀಯಂ

# ಪ್ರಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಉತ್ತರ ಪ್ರದೇಶದ ಕಾನ್ಪುರದಲ್ಲಿ ನಡೆದ ರೈಲು ದುರಂತದ ಸಂತ್ರಸ್ತರ ನೆರವಿಗೆ ಧಾವಿಸಿದ ಆರೆಸ್ಸೆಸ್ ಕಾರ್ಯಕರ್ತರು

ಸಂಪುಟ : 38 ಸಂಚಿಕೆ : 8 ದುರ್ಮುಖಿ–ಮಾರ್ಗಶಿರ ಕಲಿಯುಗಾಬ್ದ 5118 1–12–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ಕೇಂದ್ರ ಸರ್ಕಾರದಿಂದ ಕಪ್ಪು ಹಣದ ವಿರುದ್ಧ ಅಪ–ನಗದೀಕರಣ ಅಸ್ತ್ರ


ಕಳೆದ ಕೆಲವು ದಿನಗಳಿಂದ ಎಲ್ಲೆಡೆ 500 ಹಾಗೂ 1000 ರೂ. ನೋಟು ಅಪನಗದೀಕರಣ ಮತ್ತು ಕಪ್ಪು ಹಣದ ಸುದ್ದಿಗಳೇ ಹರಿದಾಡುತ್ತಿವೆ. ರಾಜಕೀಯ ಅಪಸ್ವರಗಳನ್ನು ಹೊರತುಪಡಿಸಿ ಹೆಚ್ಚಿನ ಜನರು ಸರ್ಕಾರದ ಈ ಕ್ರಮವನ್ನು ಶ್ಲಾಘಿಸಿದ್ದಾರೆ, ಕಪ್ಪು ಹಣ ನಿಯಂತ್ರಣದಲ್ಲಿ ಇದೊಂದು ಕ್ರಾಂತಿಕಾರಕ ಹೆಜ್ಜೆ ಎಂದೇ ವಿಶ್ವದ ಅನೇಕ ಆರ್ಥಿಕ ತಜ್ಞರು ಬಣ್ಣಿಸಿದ್ದಾರೆ. ಜೊತೆಗೆ ಬ್ಯಾಂಕು ಎಟಿಎಮ್‌ಗಳ ಸರತಿ ಸಾಲಿನಲ್ಲಿ ಸೋತು ಸ್ವಲ್ಪ ಬೇಸರಿಸಿಕೊಂಡವರು, ಬಚ್ಚಿಟ್ಟಿದ್ದ ಹಣವನ್ನು ದಾಟಿಸಲಾಗದೆ ಒಳಗೊಳಗೇ ಸಂಕಟಪಡುವವರೂ, ನ್ಯಾಯವಾಗಿ ಗಳಿಸಿದ ಹಣವಾದರೂ ಬ್ಯಾಂಕ್‌ನಲ್ಲಿಡದೇ ಮನೆಯಲ್ಲೇ ನಗದಿನ ರೂಪದಲ್ಲಿ ಕಾಪಿಟ್ಟುಕೊಂಡು ತಲೆಕೆಡಿಸಿಕೊಂಡವರೂ ಕೆಲವರಿದ್ದಾರೆ. ಜೊತೆಗೆ ಇದೇ ಸಮಯ ಎಂದು ದೊಡ್ಡ ಮೊತ್ತದ ಕಪ್ಪು ಹಣವನ್ನು ದಾಟಿಸಿ ಬಿಳಿ ಮಾಡಿಸಿಕೊಟ್ಟು ಕಮೀಷನ್ ವ್ಯವಹಾರ ಕುದುರಿಸುವವರೂ ಇದ್ದಾರೆ. ಆದರೆ ಸರ್ಕಾರದ ಈ ನಿರ್ಧಾರ ಕಾಳಧನಿಕರ, ಸುಳ್ಳು ಲೆಕ್ಕ ತೋರಿಸಿ ತೆರಿಗೆ ವಂಚನೆ ಮಾಡುತ್ತಿದ್ದವರ, ಭ್ರಷ್ಟ ಲಂಚಕೋರರು ಮತ್ತು ರಾಜಕೀಯ ನೇತಾರರ ನಿದ್ದೆ ಕೆಡಿಸಿದ್ದಂತೂ ನಿಜ.

ಒಟ್ಟು ಚಲಾವಣೆ ಅಥವಾ ಕೂಡಿಟ್ಟ ಸುಮಾರು 16.5 ಲಕ್ಷ ಕೋಟಿ ನಗದಿನ ಪೈಕಿ ಸುಮಾರು ಶೇ. 86ರಷ್ಟು ಐದುನೂರು ಮತ್ತು ಒಂದು ಸಾವಿರ ಮುಖಬೆಲೆಯ ನೋಟುಗಳಾಗಿದ್ದು, ಸುಮಾರು 14 ಲಕ್ಷ ಕೋಟಿ ರೂಪಾಯಿಯಷ್ಟು ಬೃಹತ್ ಮೊತ್ತದ ನಗದನ್ನು ಬದಲಾಯಿಸುವ ಕಾರ್ಯ ಒಂದು ಸವಾಲೇ ಸರಿ. ಹಾಗೆಯೇ ಅತ್ಯಂತ ಕ್ಲಿಷ್ಟ ಹಾಗೂ ಸವಾಲಿನ ಈ ಯೋಜನೆಯ ಅನುಷ್ಠಾನಕ್ಕೆ ಮುಂಚೆ ಗೌಪ್ಯತೆ ಕಾಯ್ದುಕೊಂಡು ವಂಚಕರಿಗೆ ಸರಿಯಾದ ಸಮಯದಲ್ಲಿ ಬಲವಾದ ಪೆಟ್ಟು ನೀಡಿದ ಪ್ರಧಾನಿ ಮೋದಿ ನೇತೃತ್ವದ ತಂಡದ ಕಾರ್ಯ ಪ್ರಶಂಸನೀಯವಾಗಿದೆ.

ಅಷ್ಟಕ್ಕೂ ಏಕೆ ಈ ಕಠಿಣ ನಿರ್ಧಾರವನ್ನು ಕೈಗೊಳ್ಳಬೇಕಾಯಿತು? ಚಲಾವಣೆಯಲ್ಲಿರುವ ಹಣದ ಶೇ. 86 ರಷ್ಟಾಗುವ ನೋಟುಗಳನ್ನು ವಿನಿಮಯ ಮಾಡುವಂತಹ ಬೃಹತ್ ಕಾರ್ಯದಿಂದಾಗುವ ಲಾಭವಾದರೂ ಏನು? ಅಥವಾ ವ್ಯವಹಾರ ವ್ಯಾಪಾರದಲ್ಲಷ್ಟೇ ಅಲ್ಲದೇ ಸಾಮಾನ್ಯ ಜನಜೀವನದಲ್ಲೂ ಏರುಪೇರು ಮಾಡುತ್ತಿರುವ ಈ ನಿರ್ಣಯ ಸಮಂಜಸವೇ? ಇದೊಂದು ನಿಷ್ಪ್ರಯೋಜಕ ಪ್ರಯತ್ನವೇ? ಇಂತಹ ಪ್ರಶ್ನೆಗಳು ಸಾಮಾನ್ಯ ನಾಗರಿಕರಲ್ಲಿ ಏಳುವುದು ಸಹಜ.

**ಕೆಲವೊಂದು ಪ್ರಮುಖ ಕಾರಣಗಳನ್ನು ಗಮನಿಸುವುದಾದರೆ,**

- ಲಂಚ, ಭ್ರಷ್ಟಾಚಾರ ಹಾಗೂ ಅಕ್ರಮ ವ್ಯವಹಾರಗಳಿಂದ ಅಗಾಧ ಪ್ರಮಾಣದಲ್ಲಿ ನಗದಿನ ರೂಪದಲ್ಲಿ ಕೂಡಿಟ್ಟಿದ್ದ ಕಪ್ಪು ಹಣ ಸರ್ಕಾರದ ಲೆಕ್ಕಕ್ಕೆ ಅಥವಾ ಮುಖ್ಯವಾಹಿನಿಗೆ ಬರುವಂತೆ ಮಾಡುವುದು.
- ದೇಶದ ಆರ್ಥಿಕ ವ್ಯವಸ್ಥೆಗೇ ಧಕ್ಕೆಯಾಗುವ ಲೆಕ್ಕಕ್ಕೆ ಸಿಗದ ಸಮಾನಾಂತರ ಆರ್ಥಿಕತೆ, ಹವಾಲಾ ಧಂದೆಗಳನ್ನು ನಿಯಂತ್ರಿಸುವುದು. ವಿಶ್ವಬ್ಯಾಂಕ್ 2007ರಲ್ಲೇ ಅಂದಾಜಿಸಿದಂತೆ ದೇಶದ ಜಿಡಿಪಿಯ ಶೇ. 23.2 ರಷ್ಟು – ಸುಮಾರು 35 ಸಾವಿರ ಶತಕೋಟಿ ರೂಪಾಯಿಗಳಷ್ಟು ಕಪ್ಪು ಆರ್ಥಿಕತೆ ಬೃಹತ್ತಾಗಿ ಬೆಳೆದಿದೆ.
- ಭೂಮಿ, ಚಿನ್ನ, ಆಸ್ತಿ, ಷೇರು, ವಿದೇಶಿ ಕರೆನ್ಸಿ ಮುಂತಾದ ರೂಪದಲ್ಲಿಯೂ ಕಪ್ಪು ಹಣ ಇದೆ, ಆದರೆ ನಗದಿನ ರೂಪದಲ್ಲಿಯೂ ಗಣನೀಯ ಪ್ರಮಾಣದಲ್ಲಿದೆ. ಜೊತೆಗೆ ನಗದು ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಚಲಾವಣೆಗೆ ಸಿಗುವಂಥದ್ದಾಗಿದ್ದು ಕಪ್ಪು ವ್ಯವಹಾರದ ಬೆಳವಣಿಗೆಗೆ ಸಹಕಾರಿಯಾಗಿದೆ.



- ಹೆಚ್ಚಿನ ವ್ಯವಹಾರಗಳು ಬ್ಯಾಂಕುಗಳ ಮೂಲಕ ಪಾರದರ್ಶಕವಾಗಿ ನಡೆಯುವಂತೆ ಮಾಡಿ ಸರ್ಕಾರಿ ಬೊಕ್ಕಸದಿಂದ ತೆರಿಗೆ ಸೋರಿಕೆಯಾಗುವುದನ್ನು ತಪ್ಪಿಸುವುದು. ಕಳೆದ ಸಪ್ಟೆಂಬರ್‌ವರೆಗೆ ಜಾರಿಯಲ್ಲಿದ್ದ ಸ್ವಯಂಪ್ರೇರಿತ ಕಪ್ಪು ಹಣ ಘೋಷಣೆ ಯೋಜನೆಯ ಅಡಿಯಲ್ಲಿ ಸರ್ಕಾರ ಬೊಕ್ಕಸಕ್ಕೆ 29 ಸಾವಿರ ಕೋಟಿ ರೂ. ನಷ್ಟು ಸಂಗ್ರಹವಾಗಿದೆ. ಇದರಿಂದ ತೆರಿಗೆ ವಂಚನೆ ಎಷ್ಟು ಆಳವಾಗಿದೆ ಎನ್ನುವುದನ್ನು ಅಂದಾಜಿಸಬಹುದು.
- ಒಂದು ಅಂದಾಜಿನ ಪ್ರಕಾರ ಎರಡು ಲಕ್ಷ ನೋಟುಗಳಲ್ಲಿ 250ರಷ್ಟು ನಕಲಿ ಚಲಾವಣೆಯಲ್ಲಿದ್ದು ಇವುಗಳಲ್ಲಿ ಬಹುತೇಕ ಐದುನೂರು ಮತ್ತು ಸಾವಿರ ಮುಖಬೆಲೆಯವಾಗಿವೆ. ನಕಲಿ ನೋಟುಗಳು ಪಾಕಿಸ್ತಾನ

**ಸರ್ಕಾರದ ಈ ದಿಟ್ಟ ಕ್ರಮದಿಂದ ಈಗಲೇ ಅನೇಕ ಧನಾತ್ಮಕ ಪರಿಣಾಮಗಳು ಗೋಚರವಾಗುತ್ತಿವೆ.**

- ಕೇವಲ ಏಳು ದಿನಗಳಲ್ಲಿ ಬ್ಯಾಂಕ್‌ಗಳಲ್ಲಿ ಜಮೆಯಾಗಿರುವ ಮೊತ್ತ 4 ಲಕ್ಷ ಕೋಟಿ ರೂಪಾಯಿಗೂ ಅಧಿಕ.
- ಭಯೋತ್ಪಾದಕ ಕೃತ್ಯಗಳಿಗೆ ಬಳಕೆಯಾಗುತ್ತಿದ್ದ ಕಪ್ಪು ಹಣಕ್ಕೆ ನಿಯಂತ್ರಣ ಹಾಕಿದಂತಾಗಿದೆ. ಹಾಗೆಯೇ ನಕ್ಸಲ್ ಚಟುವಟಿಕೆಗಳಿಗೂ ಲಗಾಮು ಹಾಕಿದಂತಾಗಿದೆ. ಇದ್ದಕ್ಕಿದ್ದಂತೆಯೇ ಕಾಶ್ಮೀರದ ಕಲ್ಲೆಸೆತಗಾರರು ಮಾಯವಾಗಿದ್ದು ಕಣಿವೆಯಲ್ಲಿ ಶಾಂತಿ ಮರುಕಳಿಸಿದೆ, ಜನಜೀವನ ಸಹಜವಾಗಿದೆ.
- ಆದಾಯ ತೆರಿಗೆ ಇಲಾಖೆಯ ದಾಳಿಗಳಲ್ಲಿ ಅಡಗಿಸಿಟ್ಟ ಅಪಾರ ಪ್ರಮಾಣದ ಕಪ್ಪು ಹಣ ಸಿಗುತ್ತಿದೆ, ಅನೇಕ ಧನಿಕ ಖದೀಮರು ಬೆತ್ತಲಾಗುತ್ತಿದ್ದಾರೆ. ಕಪ್ಪುಹಣ ಕಳ್ಳಸಾಗಣೆಯ ವೇಳೆ ಪೊಲೀಸರ ಕೈವಶವಾದ ಅನೇಕ ಪ್ರಕರಣಗಳು ವರದಿಯಾಗಿವೆ.
- ಒಂದೇ ಹೊಡೆತಕ್ಕೆ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದಿಂದ ಹರಿದು ಬರುತ್ತಿದ್ದ ಖೋಟಾ ನೋಟುಗಳು ನಿಷ್ಪ್ರಯೋಜಕಗೊಂಡಿವೆ.
- ಕಾನೂನು ಬಾಹಿರವಾಗಿ ಮತಾಂತರದಲ್ಲಿ ತೊಡಗಿದ್ದ ಹಲವು ಸಂಘಟನೆಗಳ ಹಣದ ಒಳಹರಿವಿನ ಮೂಲಗಳಿಗೆ ಕೊಡಲಿ ಏಟು ನೀಡಿದಂತಾಗಿದೆ.
- ವಿದ್ಯುತ್ ಬಿಲ್ ಹಾಗೂ ಭೂ ಕಂದಾಯ ಪಾವತಿಸಲು ಹಳೇ ನೋಟನ್ನು ಸ್ವೀಕರಿಸುತ್ತಿರುವುದರಿಂದ, ಬಾಕಿಯಿದ್ದ ತೆರಿಗೆ, ಕಂದಾಯ, ವಿದ್ಯುತ್ ಬಿಲ್ ಇತ್ಯಾದಿಗಳು ದಾಖಲೆಯ ವೇಗದಲ್ಲಿ ಪಾವತಿಯಾಗುತ್ತಿವೆ.
- ಮುಂದಿನ ದಿನಗಳಲ್ಲಿ ನಿವೇಶನಗಳು ಹಾಗೂ ಮನೆಗಳ ಬೆಲೆಗಳು ಇಳಿಕೆಯಾಗಲಿದ್ದು, ಹೂಡಿಕೆಗಾಗಿ ಖರೀದಿಸುವವರಿಗಿಂತ, ಸ್ವಂತ ಸೂರಿಗಾಗಿ ಖರೀದಿಸುವವರಿಗೆ ಇದರ ಹೆಚ್ಚಿನ ಲಾಭ ದೊರೆಯಲಿದೆ ಎನ್ನುವುದು ತಜ್ಞರ ಅಭಿಪ್ರಾಯ.
- ಹಣಕಾಸಿನ ವ್ಯವಹಾರಗಳು ನಗದಿನ ಬದಲು ಬ್ಯಾಂಕ್‌ಗಳ ಮೂಲಕ ಹೆಚ್ಚಾಗಿ ನಡೆಯುವುದರಿಂದ ಬ್ಯಾಂಕಿಂಗ್ ಕ್ಷೇತ್ರಕ್ಕೆ ಉತ್ತೇಜನ ದೊರಕಲಿದ್ದು, ಸಾಲಗಳ ಮೇಲಿನ ಬಡ್ಡಿದರಗಳೂ ಕಡಿಮೆಯಾಗುವ ಸಾಧ್ಯತೆಯಿದೆ. ಸರ್ಕಾರ ಇದರ ಸೂಚನೆಯನ್ನು ನೀಡಿದೆ.
- ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಬಳಕೆ ಮೊಬೈಲ್ ಮುಖಾಂತರ ಹಣಕಾಸಿನ ವಿನಿಮಯ ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ಬಳಕೆ ಗಣನೀಯವಾಗಿ ಏರಿಕೆಯಾಗಲಿದ್ದು ಆರ್ಥಿಕ ವ್ಯವಸ್ಥೆ ಕ್ಯಾಶ್‌ಲೆಸ್ ಆಗುವತ್ತ ಮುನ್ನಡೆಯಲಿದೆ.
- ಆದಾಯ ತೆರಿಗೆ ಪಾವತಿದಾರರ ಸಂಖ್ಯೆ ಪ್ರಸ್ತುತ ಕೇವಲ 3% ಆಗಿದ್ದು ಈ ಸಂಖ್ಯೆಯಲ್ಲಿ ಮಹತ್ತರ ಏರಿಕೆಯಾಗಲಿದೆ. ಇದರಿಂದ ಒಟ್ಟಾರೆ ತೆರಿಗೆ ದರದಲ್ಲಿ ಇಳಿಕೆಯಾಗಲಿದ್ದು ಪ್ರಾಮಾಣಿಕ ತೆರಿಗೆದಾರರ ಮೇಲಿನ ಹೊರೆ ಕಡಿಮೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.
- ಸರ್ಕಾರಕ್ಕೆ ಬರುವ ಹೆಚ್ಚಿನ ಆದಾಯದಿಂದಾಗಿ ರಕ್ಷಣೆ, ವಿದ್ಯುತ್, ಶಿಕ್ಷಣ, ಆರೋಗ್ಯ ಹಾಗೂ ವಸತಿ ಮುಂತಾದ ಕ್ಷೇತ್ರಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ಸಾಧ್ಯತೆಯಿದ್ದು, ಸಮಾಜ ಕಲ್ಯಾಣ ಯೋಜನೆಗಳಿಗೆ ನೀಡುವ ಅನುದಾನದಲ್ಲಿ ವೃದ್ಧಿಯಾಗಲಿದೆ.
- ಕಳೆದ ಎರಡು ವರ್ಷಗಳಿಂದ ಆರ್ಥಿಕ ಸಮಾನತೆ ಗುರಿಯೊಂದಿಗೆ ಸರ್ವರಿಗೂ ಬ್ಯಾಂಕ್ ಖಾತೆ ತೆರೆಯಲು ಪ್ರಧಾನಿ ನೀಡಿದ್ದ ಕರೆ ಹಾಗೂ ಜನ್–ಧನ್ ಯೋಜನೆಯಡಿ ತೆರೆಯಲಾಗಿದ್ದ 25 ಕೋಟಿ ಬ್ಯಾಂಕ್ ಖಾತೆಗಳ ಬಳಕೆ ಹೆಚ್ಚಾಗಿದೆ.

ಮತ್ತು ಬಾಂಗ್ಲಾದೇಶಗಳಿಂದ ನುಸುಳಿ ಬರುತ್ತಿದ್ದು, ಇದು ಭಯೋತ್ಪಾದಕ ಚಟುವಟಿಗೆ ಬಂಡವಾಳವನ್ನು ಒದಗಿಸುತ್ತಿರುವುದು ತನಿಖೆಗಳಿಂದ ಸ್ಪಷ್ಟವಾಗಿದೆ. ಪಶ್ಚಿಮ ಬಂಗಾಳದ ಮಾಲ್ಡಾದಂತಹ ಗಡಿಯ ಜಿಲ್ಲೆಗಳು ನಕಲಿ ನೋಟು ತಯಾರಿಕೆಯ ಕಾರ್ಖಾನೆಗಳಾಗಿವೆ.

- ಗಡಿಯಾಚೆಯಿಂದ ಅದರಲ್ಲೂ ವಿಶೇಷವಾಗಿ ಪಾಕಿಸ್ತಾನದಿಂದ ಭಯೋತ್ಪಾದಕ ಚಟುವಟಿಕೆಗಳಿಗೆ ಅಗಾಧ ಪ್ರಮಾಣದ ಹಣ ಪೂರೈಕೆಯಾಗುತ್ತಿದ್ದು ಇತ್ತೀಚಿನ ಕಾಶ್ಮೀರ ಕಣಿವೆಯ ಹಿಂಸಾಚಾರಗಳ ಮೂಲ ಇದರಲ್ಲಡಗಿದೆ. ಜೊತೆಗೆ ನಕ್ಸಲ್–ಮಾವೋವಾದಿ ಭಯೋತ್ಪಾದನೆಗಳಿಗೆ ಕಪ್ಪು ಹಣ ಬಳಕೆಯಾಗುತ್ತಿದೆ.
- ಚುನಾವಣೆಗಳಲ್ಲಿ ಕಪ್ಪು ಹಣದ ಆಟ ತುಂಬಾ ಜೋರಾಗಿ ನಡೆಯವುದು ಸ್ಪಷ್ಟವಾಗಿದ್ದು ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ.
- ಮಾದಕದ್ರವ್ಯ ಸಾಗಣೆಯ ಜಾಲ ನಿಂತಿರುವುದ ಕಪ್ಪು ಹಣದ ಮೇಲೆ, ವಿಶೇಷವಾಗಿ ಪಂಜಾಬ್ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ವ್ಯವಸ್ಥಿತವಾಗಿ ಹರಡಿರುವ ಈ ಜಾಲ ದೇಶದ ಯುವಜನತೆಯ ಬದುಕನ್ನೇ ನಾಶಮಾಡುತ್ತಿದೆ.
- ರಿಯಲ್ ಎಸ್ಟೇಟ್ ಮಾಫಿಯಾ, ಸ್ಮಗ್ಲಿಂಗ್ ಮಾಫಿಯಾ, ಫೈನಾನ್ಸ್ ಲೇವಾದೇವಿ ಮಾಫಿಯಾ, ಕಳ್ಳಭಟ್ಟಿ, ಶಸ್ತ್ರಾಸ್ತ್ರ ಕಳ್ಳಸಾಗಣೆ ಮೊದಲಾದ ವ್ಯವಹಾರಗಳಿಗೆ ಕಪ್ಪು ಹಣವೇ ಆಧಾರ.

ನಗದು ಬದಲಾವಣೆ ಅಥವಾ ಠೇವಣಿಗಳ ಮೂಲಕ 14 ಲಕ್ಷ ಕೋಟಿಗಳಲ್ಲಿ ಶೇ. 75ರಷ್ಟು ಬ್ಯಾಂಕುಗಳಿಗೆ ಜಮೆಯಾದರೂ ಸುಮಾರು 10.5 ಲಕ್ಷ ಕೋಟಿಯಷ್ಟು ಅಗಾಧ ಪ್ರಮಾಣದ ಹಣ ಬ್ಯಾಂಕಿಂಗ್ ಕ್ಷೇತ್ರದ ವ್ಯವಹಾರಕ್ಕೆ ಸಿಕ್ಕಿದಂತೆ ಆಗುತ್ತದೆ. ಉಳಿದ ಕಪ್ಪು ಹಣ ನಶಿಸಿ ಹೋಗುವುದರಿಂದ ಕಪ್ಪು ಆರ್ಥಿಕತೆಗೆ ದೊಡ್ಡ ನಷ್ಟವಾಗುವುದಂತೂ ನಿಜ. ಅಪನಗದೀಕರಣದಿಂದಾಗಿ ದಿನನಿತ್ಯ ನಡೆಯುವ ವಹಿವಾಟುಗಳು ಮಂದಗತಿಯಲ್ಲಿ ಸಾಗುವುದು ಮತ್ತು ಸಾಮಾನ್ಯ ನಾಗರಿಕರಿಗೆ ಕೆಲವು ಕಾಲ ತೊಂದರೆಯಾಗುವುದು ನಿಜವಾದರೂ ಒಟ್ಟಾರೆ ದೇಶದ ಆರ್ಥಿಕ ಪ್ರಗತಿಗೆ ಮತ್ತು ಭವಿಷ್ಯದಲ್ಲಿ ಎಲ್ಲ ವರ್ಗಗಳಿಗೂ ಇದು ಹಿತವಾಗಿ ಪರಿಣಮಿಸುವುದು ಎನ್ನುವುದು ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ. ಜೊತೆಗೆ ಕಪ್ಪು ಹಣದ ವಿರುದ್ಧದ ಹೋರಾಟದ ಗೆಲುವು ಸೋಲು ದೇಶದ ನಾಗರಿಕರು ಹೇಗೆ ಸ್ಪಂದಿಸುತ್ತಾರೆ ಎನ್ನುವುದರ ಮೇಲೂ ನಿಂತಿದೆ.




ಪ್ರತ್ಯೇಕತಾವಾದಿಗಳ ಹಿಂಸಾಚಾರದಿಂದ ಕಂಗೆಟ್ಟಿದ್ದ ಜಮ್ಮು–ಕಾಶ್ಮೀರ ಸುಮಾರು ನಾಲ್ಕು ತಿಂಗಳ ಬಳಿಕ ಮತ್ತೆ ಸಹಜ ಸ್ಥಿತಿಯತ್ತ ಮರಳುತ್ತಿದೆ. ದೈನಂದಿನ ಚಟುವಟಿಕೆಗಳು ಎಂದಿನ ಸ್ವರೂಪ ಪಡೆದುಕೊಳ್ಳುತ್ತಿವೆ. ಅಂಗಡಿಮುಂಗಟ್ಟುಗಳು, ವ್ಯಾಪಾರ ಸಂಸ್ಥೆಗಳು, ಪೆಟ್ರೋಲ್ ಬಂಕ್‌ಗಳು ತೆರೆದಿದ್ದವು. ಸಾರಿಗೆ ವ್ಯವಸ್ಥೆಯೂ ಸಹಜ ಸ್ಥಿತಿಯತ್ತ ಮರಳುತ್ತಿದೆ. ರಾಜ್ಯದ ಇತರ ಜಿಲ್ಲೆಗಳಿಗೆ ಸಂಪರ್ಕದಲ್ಲಿ ಸುಧಾರಣೆ ಕಂಡುಬಂದಿದೆ. ಶಾಲೆಗಳಲ್ಲೂ ಪಾಠಪ್ರವಚನ ಆರಂಭವಾಗಿದೆ. ನ. 21ರಂದು ನಡೆದ 12ನೇ ತರಗತಿ ಬೋರ್ಡ್ ಪರೀಕ್ಷೆಗಳಿಗೆ ಜಮ್ಮು ಕಾಶ್ಮೀರ, ಲೇಹ್ ಮತ್ತು ಲಡ್ಡಾಕ್‌ನ ಶೇ.95ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಇದು ರಾಜ್ಯದಲ್ಲಿನ ಭಯೋತ್ಪಾದನೆಗೆ ವಿದ್ಯಾರ್ಥಿ ಸಮುದಾಯ ನೀಡಿರುವ ಅತ್ಯಂತ ಶಕ್ತಿಯುತ ಉತ್ತರವಾಗಿದೆ. ಒಟ್ಟಿನಲ್ಲಿ ಮೋದಿ ನೋಟು ನಿಷೇಧ ಮಾಡುತ್ತಿದ್ದಂತೆ ಪಾಕ್ ಬೆಂಬಲಿಸುವ ಪ್ರತ್ಯೇಕತಾವಾದಿಗಳ ಸುಳಿವಿಲ್ಲ, ಅದರ ಸ್ಥಾಪಕರ ಮಾತಿಲ್ಲ, ಕಲ್ಲು ತೂರಾಟ ಮಾಡುವವರಿಗೆ ಕೆಲಸವಿಲ್ಲವಾಗಿದ್ದು ನಿಧಾನವಾಗಿ ಕಾಶ್ಮೀರದಲ್ಲಿ ಶಾಂತಿ ಮರುಸ್ಥಾಪನೆಯಾಗತೊಡಗಿದೆ.

ನೆಲದ ಮಾತು

# ನಾಡ ತಳಿಗಳ ಸಂರಕ್ಷಣೆಯ ಹಾದಿ

ಕೃಷಿಯನ್ನೇ ಸವಾಲನ್ನಾಗಿ ಸ್ವೀಕರಿಸಿ, ಸಮುದಾಯದ ನೆರವಿನೊಂದಿಗೆ ಭತ್ತದ ನೂರಾರು ತಳಿಯನ್ನು ಉಳಿಸಿ, ಬೆಳೆಸುತ್ತಿರುವ ಅಪರೂಪದ ಸಂಘಟನೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಗುಂಡೇನಟ್ಟಿ ಗ್ರಾಮದಲ್ಲಿ ಕಾಣಸಿಗುತ್ತದೆ.

ಸೋನಾ ಮಸೂರಿ, ಬಾಸುಮತಿ, ಜಯಾ ಹೀಗೆ ನೆನಪಿರುವ ಒಂದಿಷ್ಟು ತಳಿಯನ್ನು ಮಾತ್ರ ಬಲ್ಲ ನಮಗೆ ಇಂದ್ರಾಣಿ, ರಕ್ತಸಾಳಿ, ದೊಡಗ್ಯ, ಕರಿಗಜವಿಲೆ, ಡಾಂಬರುಸಾಳಿ, ಕರಿಯಕ್ಕಿ, ಗಂಧಸಾಳಿ, ಬೆಳಗಾಂ ಬಾಸುಮತಿ ಇನ್ನೂ ಮುಂತಾದವು ತೀರಾ ಅಪರೂಪದ ಹೆಸರುಗಳು. ಆದರೆ ಇವುಗಳು ಯಾವುವೂ ವಿಜ್ಞಾನಿಗಳ ಪ್ರಯೋಗಾಲಯದಲ್ಲಿ ಅಭಿವೃದ್ಧಿಗೊಂಡವುಗಳಲ್ಲ. ಬದಲಿಗೆ ನೂರಾರು ವರ್ಷಗಳಿಂದ ಪೂರ್ವಜರು ಜತನದಿಂದ ಕಾಪಾಡಿಕೊಂಡು ಬಂದ ಇಂಥ ಅಪರೂಪದ ಹಾಗೂ ಔಷಧೀಯ ಗುಣವಿರುವ ತಳಿಗಳನ್ನು ಗುಂಡೇನಟ್ಟಿಯ ಸಿದ್ಧಾರೂಢ ಸಾವಯವ ಕೃಷಿಕರ ಬಳಗ ಹಾಗೂ ಬೀಜ ಬ್ಯಾಂಕ್‌ನಲ್ಲಿ ನೋಡಬಹುದು, ಖರೀದಿಸಬಹುದು ಹಾಗೂ ಬೆಳೆದು ಬಳಸಲೂಬಹುದು.

ಇದರ ಮೂಲ ಕಾರಣೀಭೂತರು ಶಂಕರ ಲಂಗಟಿ. ಕೇವಲ ಮೂರನೇ ತರಗತಿಯವರೆಗೆ ಓದಿರುವ ಇವರಿಗೆ ಕೃಷಿಯಲ್ಲಿ ಅಪಾರ ಆಸಕ್ತಿ. ಪ್ರಾರಂಭದಲ್ಲಿ ತಮ್ಮ ಹಳ್ಳಿಯ ಸುತ್ತಮುತ್ತಲಿನ ರೈತರಲ್ಲಿದ್ದ ತಳಿಗಳನ್ನು ಸಂಗ್ರಹಿಸಿದ ಲಂಗಟಿ ಅವರು, ಬೀಜ ಶುದ್ಧತೆಗೆ ಹೆಚ್ಚು ಗಮನ ನೀಡಿದರು. ಜತೆಗೆ ಕೃಷಿ ವಿಶ್ವವಿದ್ಯಾಲಯಗಳು ಆಯೋಜಿಸುತ್ತಿದ್ದ ಕೃಷಿ ಮೇಳ, ಬೀಜ ಮೇಳ ಹಾಗೂ ಕೃಷಿ ಕಾರ್ಯಾಗಾರಗಳಿಗೆ ಭೇಟಿ ನೀಡಿ, ಅಲ್ಲಿಗೆ ಬರುತ್ತಿದ್ದ ರೈತರ ಬಳಿ ಇದ್ದ ದೇಸಿ ತಳಿಗಳನ್ನು ಕಲೆ ಹಾಕಿದರು. ಕೆಲವೊಮ್ಮೆ 100 ಅಥವಾ 200 ಗ್ರಾಂ ಬೀಜ ತಂದು ಅದನ್ನು ಬೆಳೆದು ಸಂರಕ್ಷಿಸಿದ ಉದಾಹರಣೆಗಳೂ ಸಾಕಷ್ಟಿವೆ. ನಂತರ ಈ ಪ್ರಯತ್ನಕ್ಕೆ ಊರಿನ ಸಮಾನಮನಸ್ಕ ರೈತರು ಜತೆಗೂಡಿದರು. ಹೀಗೆ ಸಿದ್ಧಾರೂಢ ಸಾವಯವ ಕೃಷಿಕರ ಬಳಗ ಅಸ್ತಿತ್ವಕ್ಕೆ ಬಂದಿತು.

ಒಂದು ದಶಕಕ್ಕೂ ಮೊದಲು ಆರಂಭಗೊಂಡ ಈ ಬಳಗ, 2011ರಿಂದ ನೋಂದಣಿಯಾಗಿ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂತು.



ಬಳಗದಲ್ಲಿ ಪ್ರಸ್ತುತ 40 ರೈತರಿದ್ದಾರೆ. ಸಂಘದ ಪ್ರತಿಯೊಬ್ಬ ಸದಸ್ಯನೂ ಹೆಚ್ಚಿನ ಬೇಡಿಕೆ ಇರುವ ತಳಿಗಳನ್ನು 1 ಅಥವಾ 2ಎಕರೆ ಪ್ರದೇಶದಲ್ಲಿ ಬೆಳೆಸಿ, ಬಳಗದ ಬೀಜ ಬ್ಯಾಂಕ್‌ಗೆ ಸೂಚಿಸಿದಷ್ಟು ಬೀಜವನ್ನು ನೀಡುತ್ತಾರೆ. ಇದು ಈ ಬಳಗದ ಷರತ್ತು. ಇಲ್ಲಿರುವ ಇತರೆ ತಳಿಗಳನ್ನು ಕಾಪಾಡುವ ಉದ್ದೇಶದಿಂದ ಪ್ರತಿ ತಳಿಗಳನ್ನು ಪ್ರತಿ ವರ್ಷ ಒಂದಷ್ಟು ಪ್ರದೇಶದಲ್ಲಿ ಬೆಳೆದು ತಳಿ ಹಾಗೂ ಅದರ ಶುದ್ಧತೆ, ಬೀಜದ ಮೊಳಕೆಯೊಡೆಯುವ ಸಾಮರ್ಥ್ಯ ಕಾಪಾಡಲಾಗುತ್ತಿದೆ. 80ಕ್ಕೂ ಹೆಚ್ಚು ತಳಿಗಳು ಇವರಲ್ಲಿವೆ. ಈ ಬಳಗದ ಕಾರ್ಯ ಚಟುವಟಿಕೆ ನೋಡಲು ರಾಜ್ಯದವರು ಮಾತ್ರವಲ್ಲ, ದೇಶದ ನಾನಾ ಮೂಲೆಯಿಂದ ಜನ ಬರುತ್ತಿದ್ದಾರೆ.


ಭತ್ತ ಮಾತ್ರವಲ್ಲದೆ, ಸಿರಿಧಾನ್ಯ ಹಾಗೂ ಸಾವಯವ ಬೆಲ್ಲವೂ ಇವರಲ್ಲಿ ಲಭ್ಯ. ಸಿರಿಧಾನ್ಯಗಳಲ್ಲಿ ಕೆಂಪು ನವಣೆ, ಹಾಲು ನವಣೆ, ಜಡಿ ನವಣೆ ಹಾಗೂ ಉರಕಲು ನವಣೆ, ಹಾಗೆಯೇ ಎರಡು ಬಗೆಯ ಸಾಮೆ, ಕರಿಸಾಮೆ ಹಾಗೂ ಮಲ್ಲಿಗೆ ಸಾಮೆ ಇವರಲ್ಲಿವೆ. ಇವರ ಹೊಲದಲ್ಲಿ ಸಂಕೇಶ್ವರ 247 ಎಂಬ ಕಬ್ಬಿನ ತಳಿಯನ್ನೂ ಸಾವಯವ ಪದ್ಧತಿಯಲ್ಲಿ ಬೆಳೆಯಲಾಗುತ್ತಿದೆ ಇವರ ಒಟ್ಟಾರೆ ಸಾಧನೆಯನ್ನು ಗಮನದಲ್ಲಿರಿಸಿ ಕೇಂದ್ರ ಸರ್ಕಾರವು 2012ರಲ್ಲಿ 'ಸಸ್ಯ ತಳಿ ಸಂರಕ್ಷಕ' ಎಂಬ ಗೌರವದೊಂದಿಗೆ ರೂಪಾಯಿ 10 ಲಕ್ಷ ಬಹುಮಾನವನ್ನೂ ನೀಡಿದೆ. ಲಂಗಟಿಯವರ ಸಂಪರ್ಕಕ್ಕೆ: 9972150378.

ಕೃಪೆ: ಪ್ರಜಾವಾಣಿ

## ಮಹರ್ಷಿ ಯೋಗಿ ಅರವಿಂದರ ದರ್ಶನ

ಶ್ರೀ ಅರವಿಂದ ಘೋಷ್ (1872–1950) ಭಾರತ ಕಂಡ ಉಚ್ಚಕೋಟಿಯ ದಾರ್ಶನಿಕ, ಯೋಗಿ. ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಅಧ್ವರ್ಯು, ಚಿಂತಕ ಮತ್ತು ಶಿಕ್ಷಣತಜ್ಞ ಹಾಗೂ ಪೀಳಿಗೆಯೊಂದಕ್ಕೆ ತಮ್ಮ ಕೃತಿ ಚಿಂತನೆಗಳಿಂದ ಪ್ರಭಾವಿತಗೊಳಿಸಿದ ಮಾರ್ಗದರ್ಶಕ.

ಪಂಡಿತ್ ಮದನ ಮೋಹನ ಮೌಲವೀಯ, ಸುಭಾಶ್ಚಂದ್ರ ಬೋಸ್, ರವೀಂದ್ರನಾಥ್ ಠಾಕೂರ್ ಇತ್ಯಾದಿ ಉನ್ನತಚರಿತರೂ ಶ್ರೀ ಅರವಿಂದರಿಂದ ಪ್ರಭಾವಿತರಾಗಿದ್ದವರು. ದ.ರಾ. ಬೇಂದ್ರೆ, ಕುವೆಂಪು, ಮಧುರಚೆನ್ನರು, ಶಂ.ಬಾ. ಜೋಶಿ, ಶಾಂತಾದೇವಿ ಮಾಳವಾಡರಂತಹ ಮಹಾನ್ ಕನ್ನಡಿಗರೂ ಕೂಡ ಇವರ ಸಾಹಿತ್ಯಗಳಿಂದ ಪ್ರೇರಣೆ ಪಡೆದವರೇ.




### ಶ್ರೀ ಅರವಿಂದರ ಕೆಲವು ಪ್ರಮುಖ ಸಾಹಿತ್ಯಗಳೆಂದರೆ

**ದಿವ್ಯ ಜೀವನ:** ಶ್ರೀ ಅರವಿಂದರ ಪ್ರಮುಖ ತತ್ತ್ವಶಾಸ್ತ್ರ ಕೃತಿ. ವಿಶ್ವ ಅಭಿವ್ಯಕ್ತಿಯ ಹಲವು ಸ್ತರಗಳು, ಅತೀತ ಮಾನಸ ವಿಕಸನದ ಸಾಧ್ಯತೆಗಳು, ಸನ್ನಿವೇಶಗಳು, ಸೃಷ್ಟಿ–ಸ್ಥಿತಿ–ಲಯ, ಇತ್ಯಾದಿ ಈ ಗ್ರಂಥವು ವಿಶ್ಲೇಷಿಸುವ ಕೆಲವು ವಿಷಯಗಳು.

**ಯೋಗ ಸಮನ್ವಯ:** ತಮ್ಮ ಮತ್ತು ಇತರ ಯೋಗ ಮಾರ್ಗಗಳ ವಿಷಯವಾಗಿ ಬರೆದ ಕೃತಿ.

**ಮಾನವ ಚಕ್ರ:** ಶ್ರೀ ಅರವಿಂದರ ಸಾಮಾಜಿಕ ಮತ್ತು ರಾಜನೀತಿ ವಿಷಯಕ ವಿಶ್ಲೇಷಣೆಗಳು

**ವೇದ ರಹಸ್ಯ, ಅಗ್ನಿ ಸೂತ್ರಗಳು:** ಶ್ರೀ ಅರವಿಂದರ ವೇದಾರ್ಥ ನಿರೂಪಣೆಯ ಕೃತಿ. ಇಲ್ಲಿ ವೇದಗಳನ್ನು ತಮ್ಮ ಅನುಭವಗಳ ಬೆಳಕಿನಲ್ಲಿ ಹೇಗೆ ಅರ್ಥೈಸಬಹುದೆಂದು ಚರ್ಚಿಸಲಾಗಿದೆ.

**ಸಾವಿತ್ರಿ:** ಶ್ರೀ ಅರವಿಂದರ ಮಹಾಕಾವ್ಯ.

### ಮಹರ್ಷಿಗಳ ಅನುಭವಸಾರದಂತೆ

ಮಾನವ ಸಾಂಸಾರಿಕ ಜೀವನದಲ್ಲಿಯೂ ದೈವಿಶಕ್ತಿಗಳನ್ನು ಪಡೆಯಬಲ್ಲ. ಭೌತಿಕ ಜೀವನದಲ್ಲಿದ್ದುಕೊಂಡೆ ಇತರ ಮಾನವರ ಸೇವೆಯಿಂದ ತನ್ನ ಮಾನಸವನ್ನು ಅತಿಮಾನಸವಾಗಿ ಉನ್ನತಿಗೆರಿಸಬಲ್ಲ ಮತ್ತು ತನ್ನನ್ನೇ ಅತಿಮಾನವ ಸ್ತರಕ್ಕೆ ಕೊಂಡೊಯ್ಯಬಲ್ಲ. ಶ್ರೀ ಅರವಿಂದರ ದರ್ಶನದ ಉದ್ದೇಶ ಉದಾತ್ತ ಸತ್ಯದ ಜ್ಞಾನವನ್ನು ಪಡೆಯುವುದೇ ಆಗಿದೆ. ಈ ಜ್ಞಾನವನ್ನು ಸಮಗ್ರ ಜೀವನ ದೃಷ್ಟಿಯಿಂದ ಸಾಧಿಸಿ ಬ್ರಹ್ಮಲೀನ ಅಥವಾ ಏಕಾಕಾರವನ್ನು ಹೊಂದಬಹುದಾಗಿದೆ.

ಅರವಿಂದರು ಶಿಕ್ಷಣ ಪದ್ಧತಿಯ ಭಾರತೀಕರಣಕ್ಕೆ ತತ್ಪರರಾಗಿದ್ದರು. ಶಿಕ್ಷಣದ ಮೂಲಕ ಭಾರತ ಪುನರ್ಜಾಗರಣಕ್ಕೆ ಅವರು ಕರೆಕೊಟ್ಟರು. ಮಹರ್ಷಿಗಳ ಆಶಯದಂತೆ ಈ ಪುನರ್ಜಾಗರಣ ಮೂರು ದಿಕ್ಕುಗಳಿಂದ ಉನ್ಮುಖವಾಗಿರುವಂಥದ್ದು. ಅವೆಂದರೆ:

1. ಪ್ರಾಚೀನ ಆಧ್ಯಾತ್ಮ ಜ್ಞಾನದ ಪುನಸ್ಥಾಪನೆ
2. ಆಧ್ಯಾತ್ಮ ಜ್ಞಾನದ ದರ್ಶನ, ಸಾಹಿತ್ಯ ಕಲೆ ವಿಜ್ಞಾನ ಮತ್ತು ವಿವೇಚನಾತ್ಮಕ ಜ್ಞಾನಗಳಲ್ಲಿ ಪ್ರಯೋಗ ಮತ್ತು
3. ವರ್ತಮಾನದ ಸಮಸ್ಯೆಗಳಿಗೆ ಭಾರತೀಯ ಆತ್ಮಜ್ಞಾನದ ದೃಷ್ಟಿಯಲ್ಲಿ ಕಂಡುಕೊಂಡ ಪರಿಹಾರಗಳು ಮತ್ತು ಆಧ್ಯಾತ್ಮ ಪ್ರಧಾನ ಸಮಾಜದ ಸ್ಥಾಪನೆ.

ಸಂಪಾದಕೀಯ ಸಹಕಾರ ಸತ್ಯನಾರಾಯಣ ಶಾನುಬೋಗ್, ಶೈಲೇಶ್ ಕುಲಕರ್ಣಿ, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

## ಪ್ಲಾಸ್ಟಿಕ್‌ಗೆ ಪರ್ಯಾಯದ ಕಿರುದಾರಿ



ಪ್ಲಾಸ್ಟಿಕ್‌ಗೆ ಸಂಪೂರ್ಣ ಕಡಿವಾಣ ಹಾಕುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಆಗಿರುವ ಸಮನ್ವಿ ಅವರು ಸಸ್ಯಗಳ ನಾರಿನಂಶ ಹಾಗೂ ಕೃಷಿ ತ್ಯಾಜ್ಯದಿಂದ ಆರೋಗ್ಯಕರವಾದ ಪರಿಸರಕ್ಕೆ ಪೂರಕವಾದ ಆಹಾರ ಶೇಖರಣಾ ಸಾಮಗ್ರಿಗಳಂತಹ ಸುಸ್ಥಿರ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ.

ಕಾಲೇಜು ದಿನಗಳಲ್ಲೇ ಪರಿಸರಕ್ಕೆ ಉಪಯೋಗಿಯಾಗುವ ಯೋಜನೆಗಳನ್ನು ರೂಪಿಸಿದ್ದ ಸಮನ್ವಿ ಅವರು, ಪ್ಲಾಸ್ಟಿಕ್ ಪರ್ಯಾಯವನ್ನೇ ಮೂಲವಾಗಿಟ್ಟು 2011ರಲ್ಲಿ ಡಿಸ್‌ಫೋರ್ಟಿಕ್ ಕಂಪೆನಿ ಆರಂಭಿಸಿ 'ಬಯೋಪ್ಲಾಸ್ಟಿಕ್' ಪ್ರಯೋಗಗಳಲ್ಲಿ ತೊಡಗಿಕೊಂಡರು. ಜೋಳದಗಂಜಿ(ಕಾರ್ನ್‌ಸ್ಟಾರ್ಚ್) ಬಳಸಿ ಕೈಚೀಲ ಹಾಗೂ ಕಬ್ಬು, ಗೋಧಿ ಹುಲ್ಲು, ಬಿದಿರು, ಮಾವು ಸೇರಿದಂತೆ ಕೃಷಿ ತ್ಯಾಜ್ಯವನ್ನು ಉಪಯೋಗಿಸಿಕೊಂಡು ಸಂಪೂರ್ಣ ಪ್ಲಾಸ್ಟಿಕ್‌ನಂತೆ ಕಾಣುವ ಭಿನ್ನ ಗಾತ್ರದ ತಟ್ಟೆ, ಲೋಟ, ಬಟ್ಟಲು, ಕಪ್, ಮೀಲ್ ಟ್ರೇ, ಊಟದ ಡಬ್ಬಿ, ಕಟ್ಲೆರಿಗಳನ್ನು, ಮರದ ಚಮಚಗಳನ್ನು ತಯಾರಿಸಿದರು. ಆಹಾರ ಸೋರದಂತೆ ಹಾಗೂ ನೀರು ಮತ್ತು ಎಣ್ಣೆಯನ್ನು ತಡೆಯುವಂತೆ ಹಾಗೂ ಎಸೆದ 90ದಿನಗಳೊಳಗೆ ಮಣ್ಣಿನಲ್ಲಿ ಸಂಪೂರ್ಣ ಕರಗಿಹೋಗುವಂತೆ ಇದನ್ನು ವಿನ್ಯಾಸಗೊಳಿಸಿದರು.

ಇದರ ತಯಾರಿಕೆಯಲ್ಲಿ ಮಹಿಳೆಯರು ಹಾಗೂ ಅಂಗವಿಕಲರಿಗೆ ಪ್ರಾಶಸ್ತ್ಯ ನೀಡಿದರು. ಸಮನ್ವಿ ಅವರು ತುಮಕೂರು, ನೆಲಮಂಗಲ, ಮೈಸೂರು ಮುಂತಾದ ಗ್ರಾಮಗಳಿಗೆ ಭೇಟಿ ನೀಡಿ ಮಹಿಳೆಯರಿಗೆ ಈ ಉದ್ಯಮದ ಕುರಿತು ಜಾಗೃತಿ ಮೂಡಿಸಿ, ತರಬೇತಿ ನೀಡಿ ಉತ್ಪನ್ನ ತಯಾರಿಕೆಯಲ್ಲಿ ಅವರನ್ನು ಜೋಡಿಸಿಕೊಂಡರು. ಇದೀಗ ಪ್ಲಾಸ್ಟಿಕ್ ಬಳಕೆಯ ಪರಿಣಾಮದ ಕುರಿತು ಜಾಗೃತಿ ಮೂಡಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಶಾಲೆಗಳಿಗೆ ಹೋಗಿ ಮಕ್ಕಳಲ್ಲಿ ಪರಿಸರಪ್ರಜ್ಞೆ ಮೂಡಿಸುವ ಕೆಲಸವನ್ನೂ, ಅಡಿಕೆಸಾಮಗ್ರಿಗಳು, ಮಣ್ಣಿನ, ಸ್ಟೀಲ್‌ಸಾಮಗ್ರಿಗಳನ್ನು ಪ್ಲಾಸ್ಟಿಕ್‌ಗೆ ಬದಲಿಯಾಗಿ ಉಪಯೋಗಿಸುವ ಹಲವು ದಾರಿಗಳ ಕುರಿತು ತಿಳಿಸಿ ಹೇಳುತ್ತಿದ್ದಾರೆ.

ವೆಬ್‌ಸೈಟ್: earthwareproducts.com

## ದೇಸಿ ಜಾನುವಾರು ತಳಿ ಅಭಿವೃದ್ಧಿ

**ಅಂಕಿ-ಅಂಶ**

- **10.42** ಲಕ್ಷ — ಮಲೆನಾಡು ಗಿಡ್ಡ
- **16.94** ಲಕ್ಷ — ಹಳ್ಳಿಕಾರ್
- **1.8** ಲಕ್ಷ — ದೇವಣಿ



ಹವಾಮಾನ ಬದಲಾವಣೆಯ ಹಿನ್ನೆಲೆಯಲ್ಲಿ ರಾಜ್ಯದ ದೇಸಿ ಜಾನುವಾರುಗಳ ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ ಕೇಂದ್ರ ಸರ್ಕಾರ 24.56 ಕೋಟಿ ಅನುದಾನವನ್ನು ಕರ್ನಾಟಕಕ್ಕೆ ಮಂಜೂರು ಮಾಡಿದೆ.

ದೇಸಿ ಜಾನುವಾರುಗಳ ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ ರಾಜ್ಯ ಸರ್ಕಾರ ರೂಪಿಸಿರುವ ಈ ಯೋಜನೆಯಡಿ ದೇಸಿ ತಳಿಗಳಾದ ಹಳ್ಳಿಕಾರ್, ಮಲೆನಾಡು ಗಿಡ್ಡ ಹಾಗೂ ದೇವಣಿ ತಳಿಗಳ ಉತ್ಪಾದಕತೆ ಸಾಮರ್ಥ್ಯ ಗುರುತಿಸಿ ಉತ್ತಮ ರಾಸುಗಳನ್ನು ಆಯ್ಕೆಮಾಡಿ ಪಶುಸಂಗೋಪನೆ ಇಲಾಖೆ ಜಾನುವಾರು ಕ್ಷೇತ್ರಗಳಲ್ಲಿ ವ್ಯವಸ್ಥಿತವಾಗಿ ತಳಿ ಸಂವರ್ಧನೆ ಕೈಗೆತ್ತಿಕೊಳ್ಳಲಿದೆ. ಜೊತೆಗೆ ರಾಜ್ಯದ ದೇಸಿ ತಳಿ ಕುರಿಗಳಾದ ಬಂಡೂರು, ಡೆಕ್ಕನಿ ಹಾಗೂ ಬಳ್ಳಾರಿ ಕುರಿ ತಳಿಗಳನ್ನೂ ಇಲಾಖೆಯ ಸಂವರ್ಧನಾ ಕುರಿ ಕ್ಷೇತ್ರಗಳಲ್ಲಿ ವ್ಯವಸ್ಥಿತ ತಳಿ ಸಂವರ್ಧನೆ ಮೂಲಕ ಅಭಿವೃದ್ಧಿಪಡಿಸಲಿದೆ. ಐದು ವರ್ಷಗಳ ಈ ಯೋಜನೆಗೆ ಕೇಂದ್ರ ಸರ್ಕಾರ ಈಗಾಗಲೇ ಮೊದಲ ಕಂತಿನಲ್ಲಿ 12 ಕೋಟಿ ಬಿಡುಗಡೆಮಾಡಿದೆ. ರಾಜ್ಯ ಸರ್ಕಾರ ಈ ಯೋಜನೆಯನ್ನು 17 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಿದೆ. ರಾಜ್ಯ ಸರ್ಕಾರವು ದೇಸಿ ಕುರಿ ತಳಿಗಳ ಘನೀಕೃತ ವೀರ್ಯ ಕೇಂದ್ರಗಳನ್ನು ಆರಂಭಿಸಲು ನಿರ್ಧರಿಸಿದ್ದು, ಇದಕ್ಕಾಗಿ 3ಕೋಟಿ ಅನುದಾನ ಮಂಜೂರು ಮಾಡಿದೆ.

ರಾಜ್ಯದ ಬಹುತೇಕ ಭಾಗಗಳಲ್ಲಿ ವಾತಾವರಣ ಉಷ್ಣತೆಯು 0.6 ಡಿಗ್ರಿ ಸೆಲ್ಸಿಯಸ್ ಜಾಸ್ತಿಯಾಗಿದೆ. 2030ರ ವೇಳೆಗೆ ಉಷ್ಣಾಂಶದಲ್ಲಿ 1ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಬಹುದು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಉಷ್ಣತೆಯ ಹೆಚ್ಚಳದಿಂದ ಜಾನುವಾರುಗಳ ಆರೋಗ್ಯ ಮತ್ತು ಉತ್ಪಾದಕತೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಮಿಶ್ರ ತಳಿ ಹಾಗೂ ವಿದೇಶಿ ತಳಿ ರಾಸುಗಳಲ್ಲಿ ಶಾಖಯಾತನೆ ಹಾಗೂ ಪರತಂತ್ರ ಜೀವಿಗಳ ಸೋಂಕು ಅಧಿಕವಾಗುತ್ತಿದೆ ಎಂದು ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ ತಿಳಿಸಿದೆ.

### ಪ್ಯಾಕೇಟ್‌ನಲ್ಲಿ ದೇಸಿ ತಳಿಗಳ ಹಾಲು

**ಕರ್ನಾಟಕ ಹಾಲು ಮಹಾಮಂಡಲದ ಮೂಲಕ ದೇಸಿ ತಳಿಗಳ ಹಾಲನ್ನು ಪ್ಯಾಕೇಟ್‌ನಲ್ಲಿ ಮಾರಾಟ ಮಾಡಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಇಲಾಖೆಯು ಕೆಎಂಎಫ್‌ಗೆ 2 ಕೋಟಿ ನೀಡಿದೆ. ಆರಂಭಿಕ ಹಂತದಲ್ಲಿ ಶಿವಮೊಗ್ಗ ಹಾಗೂ ಬೀದರ್ ಜಿಲ್ಲೆಗಳಲ್ಲಿ ಜನವರಿ ಅಥವಾ ಫೆಬ್ರುವರಿಯಲ್ಲಿ ಮಾರಾಟ ಆರಂಭವಾಗಲಿದೆ ಎಂದು ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆಯ ಯೋಜನಾ ನಿರ್ದೇಶಕ ಡಾ. ಎಂ.ಟಿ. ಮಂಜುನಾಥ್ ತಿಳಿಸಿದೆ.**



**ಭಾರತೀಯರು ಸುಮಾರು 5 ಸಾವಿರ ವರ್ಷಗಳ ಹಿಂದೆಯೇ ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಭತ್ತ ಮತ್ತಿತರ ಧಾನ್ಯಗಳನ್ನು ಬೆಳೆಯುತ್ತಿದ್ದರು ಎಂದು ಹೊಸ ಸಂಶೋಧನೆಯೊಂದು ತಿಳಿಸಿದೆ. ಕ್ರಿಸ್ತ ಪೂರ್ವ 2800ರ ಸುಮಾರಿಗೆ ಭಾರತದಲ್ಲಿ ಸುಧಾರಿತ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿತ್ತು. ಸಿಂಧೂ ನಾಗರಿಕತೆಯ ಜನರು ನದಿಯ ದಂಡೆಗಳಲ್ಲಿ ನೆಲೆಸಿ ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದರು. ಹೀಗಾಗಿ ಭಾರತೀಯರನ್ನು ವಿಶ್ವದ ಮೊದಲ ಕೃಷಿಕರು ಎನ್ನಬಹುದಾಗಿದೆ ಎಂದು ವಿಜ್ಞಾನಿಗಳ ತಂಡವೊಂದು ಅಭಿಪ್ರಾಯಪಟ್ಟಿದೆ. ಈವರೆಗೆ ಚೀನಾವನ್ನು ಕೃಷಿ ಚಟುವಟಿಕೆಗಳನ್ನು ಅಳವಡಿಸಿಕೊಂಡ ಜಗತ್ತಿನ ಮೊದಲ ದೇಶ ಎಂದು ಹೇಳಲಾಗುತ್ತಿತ್ತು.**

## ಶೌರ್ಯ ಪ್ರಶಸ್ತಿ ಪುರಸ್ಕೃತ ಸಾಹಸಿ ಮಕ್ಕಳು...

**ಗೆಳೆಯರು, ಕುಟುಂಬದವರು ಹಾಗೂ ಸಮಾಜದ ಒಳಿತಿಗಾಗಿ ಪ್ರಾಣದ ಹಂಗು ತೊರೆದು, ಧೈರ್ಯದಿಂದ ಹೋರಾಡುವಂತಹ ಮಕ್ಕಳು ನಮ್ಮ ನಡುವೆ ಇದ್ದಾರೆ. ಅಂತಹವರ ಸಾಹಸವನ್ನು ಗುರುತಿಸಿ ಪ್ರತೀ ವರ್ಷ ಕೇಂದ್ರ ಸರ್ಕಾರ ಅವರಿಗೆ ಶೌರ್ಯ ಪ್ರಶಸ್ತಿ ನೀಡಿ, ಅವರಲ್ಲಿ ಆತ್ಮಸ್ಥೈರ್ಯ ತುಂಬುತ್ತಿದೆ. ಈ ಬಾರಿ ಶೌರ್ಯ ಪ್ರಶಸ್ತಿ ಪಡೆದ ಮಕ್ಕಳ ಸಾಹಸ ಕಥೆಗಳ ಕಿರು ಪರಿಚಯ ಇಲ್ಲಿದೆ.**

### ಕಳ್ಳನ ಹಿಡಿದ ದಿಶಾಂತ್ ಎಂ.



ಹರಿಯಾಣ ಮೂಲದ ದಿಶಾಂತ್ ತನ್ನ ಪ್ರಾಣವನ್ನು ಲೆಕ್ಕಿಸದೇ ಕಳ್ಳನೊಬ್ಬನಿಂದ ತಾಯಿ ಮತ್ತು ತಮ್ಮನನ್ನು ರಕ್ಷಿಸಿದ ಕಥೆ ಇದು. ದಿಶಾಂತ್ ಆ ಕ್ಷಣದಲ್ಲಿ ತೋರಿದ ದಿಟ್ಟತನ ಮತ್ತು ಚಾಣಾಕ್ಷತೆ ನಮ್ಮ ಪ್ರಾಣ ಉಳಿಸಿತು ಎಂದು ಅವನ ತಾಯಿ ಹೆಮ್ಮೆಯಿಂದ ಹೇಳುತ್ತಾರೆ. ದಿಶಾಂತ್‌ನ ಈ ಸಾಹಸಕ್ಕೆ 2015ನೇ ಸಾಲಿನ ಶೌರ್ಯ ಪ್ರಶಸ್ತಿ ಸಂದಿದೆ.

ದಿಶಾಂತ್, ಹರಿಯಾಣ ರಾಜ್ಯದ ಪಂಚಕುಲ ನಗರದವರು. ತಂದೆ ರವೀಂದರ್ ಚಾರ್ಟೆಡ್ ಅಕೌಂಟೆಂಟ್. ತಾಯಿ ಅರ್ಚನಾ ಗೃಹಿಣಿ. ರವೀಂದರ್ ದಂಪತಿಗೆ 13 ವರ್ಷದ ದಿಶಾಂತ್ ಮತ್ತು 9 ವರ್ಷದ ರಿಯಾನ್ ಎಂಬ ಇಬ್ಬರು ಗಂಡು ಮಕ್ಕಳು.

ಏಪ್ರಿಲ್‌ನಲ್ಲಿ ಬೇಸಿಗೆ ರಜೆ ಇದ್ದುದರಿಂದ ದಿಶಾಂತ್ ಮತ್ತು ರಿಯಾನ್ ಮನೆಯಲ್ಲೇ ಕಾಲ ಕಳೆಯುತ್ತಿದ್ದರು. ಒಂದು ದಿನ ಮಧ್ಯಾಹ್ನ ರವೀಂದರ್ ಮನೆಯಲ್ಲಿ ಇಲ್ಲದಿರುವಾಗ ಅವರ ಮನೆಗೆ ಆಗಮಿಸಿ 'ನಾನು ಐಟಿ ಫೈಲ್ ಮಾಡಿಸಬೇಕಾಗಿದೆ, ನಿಮ್ಮ ಯಜಮಾನರು ನನಗೆ ಚೆನ್ನಾಗಿ ಗೊತ್ತು ಅವರ ಜೊತೆಯಲ್ಲಿ ಮಾತನಾಡಬೇಕು ಅವರಿಗೆ ಫೋನ್ ಮಾಡಿಕೊಡಿ' ಎಂದು ಪರಿಚಿತನಂತೆ ಕೇಳುತ್ತಾನೆ. ಆತನನ್ನು ನಂಬಿದ ಅರ್ಚನಾ, ಮನೆಯ ಒಳಗಡೆ ಕರೆದು ಸೋಫಾ ಮೇಲೆ ಕೂರಿಸಿ, ಪತಿ ರವೀಂದರ್‌ಗೆ ಫೋನ್ ಮಾಡಲು ಮುಂದಾಗುತ್ತಾರೆ. ಕೂಡಲೇ ಆ ವ್ಯಕ್ತಿ ಚಾಕುವನ್ನು ತೆಗೆದು ಅರ್ಚನಾ ಕುತ್ತಿಗೆಗೆ ಹಿಡಿದು, ಮನೆಯಲ್ಲಿರುವ ಆಭರಣ ಮತ್ತು ಹಣವನ್ನು ಕೊಡುವಂತೆ ಹೆದರಿಸುತ್ತಾನೆ. ಈ ವೇಳೆ ಜಾಗೃತನಾದ ದಿಶಾಂತ್, ಸೋಫಾದ ಮೇಲೆ ಜಿಗಿದು ಟೀಪಾಯಿ ಮೇಲಿದ್ದ ಕಬ್ಬಿಣದ ಹೂದಾನಿಯನ್ನು ತೆಗೆದುಕೊಂಡು ಆ ವ್ಯಕ್ತಿಗೆ ಬಲವಾಗಿ ಹೊಡೆಯುತ್ತಾನೆ. ಹೊಡೆತದ ರಭಸಕ್ಕೆ ಚಾಕು ಕೆಳಗಡೆ ಬೀಳುತ್ತದೆ. ನಂತರ ಎಲ್ಲರೂ ಒಂದೇ ಸಮನೆ ಕಿರುಚುತ್ತಾರೆ. ಕೂಗಾಟದ ಸದ್ದು ಕೇಳಿದ ಅಕ್ಕಪಕ್ಕದವರು ಓಡಿ ಬಂದು ಆ ಕಳ್ಳನನ್ನು ಹಿಡಿದು ಪೊಲೀಸರಿಗೆ ಒಪ್ಪಿಸುತ್ತಾರೆ.

### ಸಮಯಪ್ರಜ್ಞೆ ಮೆರೆದ ಎಸ್. ರುಚಿತಾ



'ನನ್ನ ಪಕ್ಕದಲ್ಲಿ ಕುಳಿತಿದ್ದ ಇಬ್ಬರನ್ನು ರಕ್ಷಿಸಿದೆ, ನನ್ನ ಸಹೋದರ ಮತ್ತು 16 ಜನ ಗೆಳೆಯರನ್ನು ರಕ್ಷಿಸಲು ನನ್ನಿಂದ ಸಾಧ್ಯವಾಗಲಿಲ್ಲ, ನಾನು ಅವರನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ' ಎನ್ನುತ್ತ ಬಾಲಕಿ ರುಚಿತಾ ಪ್ರಧಾನ ಮಂತ್ರಿ ನರೇಂದ್ರ ಮೋದಿ ಎದುರು ಕಂಬನಿ ಮಿಡಿದಾಗ ಅಲ್ಲಿ ನೆರೆದಿದ್ದವರ ಕಣ್ಣಾಲಿಗಳು ತೇವಗೊಂಡಿದ್ದವು. ಶೌರ್ಯ ಪ್ರಶಸ್ತಿ ಸ್ವೀಕರಿಸಿದ ಬಳಿಕ ರುಚಿತಾ ರೈಲು ದುರಂತದ ಕಹಿ ಘಟನೆಯನ್ನು ನೆನಪಿಸಿಕೊಂಡು ಕಣ್ಣೀರು ಹಾಕಿದ್ದರು. ಹತ್ತು ವರ್ಷದ ರುಚಿತಾ, ಸಮಯಪ್ರಜ್ಞೆ ಮೆರೆದು ರೈಲಿಗೆ ಸಿಲುಕುತ್ತಿದ್ದ ಇಬ್ಬರು ಮಕ್ಕಳನ್ನು ರಕ್ಷಿಸಿದ ಸಾಧನೆಯ ಕಥೆ ಇದು.

ರುಚಿತಾ ತೆಲಂಗಾಣ ರಾಜ್ಯದ ಸಿಕಂದರಾಬಾದ್‌ಗೆ ಹೊಂದಿಕೊಂಡಿರುವ ಮಸೈಪೇಟೆಯವರು. ಖಾಸಗಿ ಇಂಗ್ಲಿಷ್ ಶಾಲೆಯಲ್ಲಿ 4ನೇ ತರಗತಿ ಓದುತ್ತಿದ್ದ ರುಚಿತಾಗೆ ಒಬ್ಬ ಅಣ್ಣ ಹಾಗೂ ಪುಟ್ಟ ತಂಗಿ ಇದ್ದರು. ಅವರು ಕೂಡ ರುಚಿತಾ ಓದುತ್ತಿದ್ದ ಶಾಲೆಯಲ್ಲೇ ವ್ಯಾಸಂಗ ಮಾಡುತ್ತಿದ್ದರು. ನಿತ್ಯವೂ ಅವರೆಲ್ಲರೂ ಶಾಲಾ ಬಸ್‌ನಲ್ಲೇ ಸ್ಕೂಲ್‌ಗೆ ಹೋಗುತ್ತಿದ್ದರು. ಆ ಶಾಲೆ ಇರುವ ಅನತಿ ದೂರದಲ್ಲೇ ರೈಲ್ವೆ ಹಳಿ ಹಾದು ಹೋಗಿತ್ತು. ಆ ಶಾಲಾ ಬಸ್ ಕಾವಲುರಹಿತ ಹಳಿಯನ್ನು ದಾಟಿಕೊಂಡೇ ಹೋಗಬೇಕಾಗಿತ್ತು. ಅದು ಜುಲೈ ತಿಂಗಳ 24ನೇ ತಾರೀಖು. ರುಚಿತಾ ಎಂದಿನಂತೆ ಬಸ್‌ನಲ್ಲಿ ಅಣ್ಣ ತಂಗಿ ಮತ್ತು ಗೆಳೆಯರೊಟ್ಟಿಗೆ ಶಾಲೆಗೆ ಹೋಗುತ್ತಿದ್ದರು. ಅಂದು ಬಸ್ ಚಾಲಕ ದೂರದಲ್ಲಿ ರೈಲು ಬರುವುದನ್ನು ಗಮನಿಸಿದ್ದ! ಅದು ಬರುವುದರೊಳಗೆ ಹಳಿ ಕ್ರಾಸ್ ಮಾಡಬಹುದು ಎಂದುಕೊಂಡು ಹೊರಟೇಬಿಟ್ಟ. ದುರದೃಷ್ಟವಶಾತ್ ಆ ಬಸ್ ರೈಲ್ವೇ ಹಳಿ ಮೇಲೆ ಕೆಟ್ಟು ನಿಂತಿತು. ಚಾಲಕ ಎಷ್ಟೇ ಪ್ರಯತ್ನಿಸಿದರೂ ಬಸ್ ಚಾಲೂ ಆಗಲಿಲ್ಲ.

ರೈಲು ಬಸ್ಸಿಗೆ ಡಿಕ್ಕಿ ಹೊಡೆಯಲಿದೆ ಎನ್ನುವಷ್ಟರಲ್ಲಿ ರುಚಿತ ತನ್ನ ಪಕ್ಕದಲ್ಲಿ ಕುಳಿತಿದ್ದ ಇಬ್ಬರು ಗೆಳೆಯರನ್ನು ಕಿಟಕಿಯಿಂದ ಆಚೆ ತಳ್ಳಿ ತಾನೂ ರಸ್ತೆಗೆ ಜಿಗಿದಳು. ಕಣ್ಣು ಬಿಡುವಷ್ಟರಲ್ಲಿ ರೈಲು ಬಸ್ ಮೇಲೆ ಹರಿದಿತ್ತು. ಘಟನೆಯಲ್ಲಿ ಹದಿನಾರು ಜನ ಮಕ್ಕಳು ಸಾವನ್ನಪ್ಪಿದರು. ಅವರಲ್ಲಿ ರುಚಿತಾ ಅಣ್ಣನೂ ಸೇರಿದ್ದ. ತನ್ನ ಸಮಯಪ್ರಜ್ಞೆಯಿಂದ ಇಬ್ಬರು ಮಕ್ಕಳನ್ನು ರಕ್ಷಿಸಿದ್ದಕ್ಕಾಗಿ ರುಚಿತಾಗೆ ಕೇಂದ್ರ ಸರ್ಕಾರ ಶೌರ್ಯ ಪ್ರಶಸ್ತಿ ನೀಡಿದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

1-12-2016



# ಹಿಂದೂ ಸಮಾಜ ಮತ್ತು ಮಾನವ ಹಕ್ಕುಗಳು

ಎರಡನೇ ವಿಶ್ವಸಮರದ ಅಸಹನೀಯ ಸಾವುನೋವುಗಳ ಕರಾಳ ಅಧ್ಯಾಯದ ನಂತರ ಜಾಗತಿಕವಾಗಿ ಅದರಲ್ಲೂ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಶಾಂತಿ ಹಾಗು ಸಹಬಾಳ್ವೆಯ ಅಗತ್ಯತೆ ಅತ್ಯಂತ ತುರ್ತಾಗಿ ಕಾಡತೊಡಗಿತ್ತು.

ಮುದುಡಿದ ಮನ, ಮುರಿದು ಹೋದ ಮನೆ, ಅನಾಥ ಪ್ರಜ್ಞೆಯನ್ನು ನೀಗದ ಸಮಾಜ ಇಂತಹ ವಿಷಮಭಾವಗಳಿಂದ ಹೆಚ್ಚುಕಡಿಮೆ ಸಂಪೂರ್ಣ ಐರೋಪ್ಯ ರಾಷ್ಟ್ರಗಳೆಲ್ಲ ಜರ್ಜರಗೊಂಡಿದ್ದವು. ಪರಸ್ಪರರ ಮಧ್ಯೆ ಬಿರುಕು ಬಿಟ್ಟಿರುವ ವೈಚಾರಿಕ, ಸಾಮಾಜಿಕ, ಆರ್ಥಿಕ, ಮತೀಯ, ಸಾಂಸ್ಕತಿಕ ಕಂದಕಗಳು ಮಾನವ ಜಗತ್ತನ್ನೇ ವಿನಾಶದ ಅಂಚಿಗೆ ತಂದು ನಿಲ್ಲಿಸಿದ್ದ ಘಟ್ಟ ಅದಾಗಿತ್ತು. ವಿಪರೀತ ಪರಿಸ್ಥಿತಿಯಲ್ಲಿ ಕಲಿತ ಪಾಠಗಳ ಪರಿಣಾಮವಾಗಿ 1948ರ ಡಿಸೆಂಬರ್ 10ರಂದು ಪ್ಯಾರಿಸ್‌ನಲ್ಲಿ ಸೇರಿದ್ದ ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯಲ್ಲಿ ಮೊಟ್ಟಮೊದಲ ಮೊದಲ ಬಾರಿಗೆ 'ಮಾನವ ಹಕ್ಕು'ಗಳ ವೈಶ್ವಿಕ ಕಲ್ಪನೆಗೆ (UDHR) ಒಮ್ಮತ ಮೂಡಿತು. ಪ್ರತಿಯೊಬ್ಬ ಮನುಷ್ಯನನ್ನು ಗೌರವ ಹಾಗೂ ಆದರಗಳಿಂದ ಕಂಡಲ್ಲಿ ಪ್ರಪಂಚದಲ್ಲೆಡೆ ಶಾಂತಿ ತಾನೇ ತಾನಾಗಿ ನೆಲೆಸುತ್ತದೆ. ಈ ಅನಿಸಿಕೆಯ ಪರಿಣಾಮವಾಗಿಯೇ ಮಾನವ ಹಕ್ಕುಗಳ ಘೋಷಣೆ ಜಾರಿಗೆ ಬಂದಿತು.



ಡಿ.10
ಮಾನವ
ಹಕ್ಕುಗಳ ದಿನ

ಸ್ಥೂಲವಾಗಿ ವಿಶ್ವಸಂಸ್ಥೆ ಒಪ್ಪಿಕೊಂಡಿರುವ ಮಾನವ ಹಕ್ಕುಗಳ ನಿಲುವಳಿಯನ್ನು ಈ ರೀತಿಯಾಗಿ ಅರ್ಥೈಸಬಹುದು: "ಮಾನವಮಾತ್ರರೆಲ್ಲರಿಗೂ ಸಾರ್ವತ್ರಿಕ ಗೌರವ ಮತ್ತು ಆಚರಣೆಗೆ ಆಸ್ಪದ ಕೊಡುವ, ಜನಾಂಗ, ಲಿಂಗ, ಬಣ್ಣ, ಭಾಷೆ, ಮತ-ಪಂಗಡಗಳ ಭೇದವಿರದಂತೆ ಸರ್ವರನ್ನೂ ಒಳಗೊಳ್ಳುವ ಮೂಲಭೂತ ಸ್ವಾತಂತ್ರ್ಯ." ವ್ಯಕ್ತಿ-ವ್ಯಕ್ತಿಯ ನಡುವಿನ ಅಂತರಗಳನ್ನು ತಗ್ಗಿಸುವ ಇಂತಹ ಪ್ರಯತ್ನಗಳು ಅನೂಚಾನವಾಗಿ ವಿಶ್ವದಾದ್ಯಂತ ನಡೆಯುತ್ತಲೇ ಬಂದಿವೆ. ಭಾರತದ ಸಂದರ್ಭದಲ್ಲಂತೂ ಮಾನವನ ಹಕ್ಕುಗಳ ಕುರಿತಾದ ಚಿಂತನೆ ಅಭಿವ್ಯಕ್ತಿಗಳು ವೇದಕಾಲದಿಂದಲೇ ಇರುವುದನ್ನು ನೋಡಬಹುದಾಗಿದೆ. ವ್ಯಕ್ತಿ-ಸಮಷ್ಟಿಯ ಮಧ್ಯದ ಸಂಬಂಧಗಳು ಹಕ್ಕು-ಕರ್ತವ್ಯಗಳ ಸಮತೋಲಿತ ಕರ್ಮಸಿದ್ಧಾಂತವಾಗಿ ಇಂದಿಗೂ ಜನಾಂಗವೊಂದರ ಸಮರಸದ ಬಾಳ್ವೆಗೆ ಕಾರಣವಾಗಿರುವುದು ಕಾಣಬಹುದು.

ಸ್ವಾತಂತ್ರ್ಯದ ನಂತರ ಸಂವಿಧಾನಾತ್ಮಕವಾಗಿ ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಕೆಲವು ಮೂಲಭೂತ ಹಕ್ಕುಗಳನ್ನು ಹೊಂದಿದ್ದಾನೆ. ಅವುಗಳೆಂದರೆ:

- ಸಮಾನತೆಯ ಹಕ್ಕು
- ಸ್ವಾತಂತ್ರ್ಯದ ಹಕ್ಕು
- ದುರುಪಯೋಗ ವಿರೋಧಿಸುವ ಹಕ್ಕು
- ಧರ್ಮ ಪಾಲಿಸುವ ಹಕ್ಕು
- ಸಾಂಸ್ಕೃತಿಕ ಮತ್ತು ಶಿಕ್ಷಣದ ಹಕ್ಕು
- ಸಂವಿಧಾನದ ಅಡಿಯಲ್ಲಿ ಪರಿಹಾರ ಪಡೆಯುವ ಹಕ್ಕು

ಹಾಗಾದಲ್ಲಿ ಸಂವಿಧಾನಬದ್ಧವಾಗಿ ತನಗಿರುವ ಹಕ್ಕುಗಳ ಕಲ್ಪನೆ ಹಿಂದೂಸಮಾಜಕ್ಕೆ ಮೂಡಿದೆಯೇ? ಇಂತಹ ಹಕ್ಕುಗಳು ಇತರ ಸಮಾಜಗಳಿಗೆ ಅನ್ವಯವಾಗುವಂತೆ ಹಿಂದುಗಳಿಗೂ ಆಗುತ್ತವೆಯೇ? ಹಿಂದೂಗಳ ಹಿತಾಸಕ್ತಿಗಳ ವಸ್ತುಸ್ಥಿತಿ ಹೇಗಿದೆ ಇದು ನಮ್ಮ ಮುಂದಿನ ಪ್ರಶ್ನೆ. ಉದಾಹರಣೆಗೆ:

- ಧಾರ್ಮಿಕ ಸ್ವಾತಂತ್ರ್ಯ ಇದು ಸಂವಿಧಾನದತ್ತ ಹಕ್ಕು. ಹಾಗಾದಲ್ಲಿ ಹಿಂದೂ ಮಠಮಾನ್ಯಗಳ, ದೇವಸ್ಥಾನಗಳ ಆಡಳಿತದಲ್ಲಿ ಸರ್ಕಾರಿ ಅತಿಕ್ರಮಣದ ಪ್ರಕರಣಗಳು ಸಂವಿಧಾನಬದ್ಧ ಹಕ್ಕಿನ ಚ್ಯುತಿಯಲ್ಲವೇ?
- ಕ್ರೈಸ್ತ ಮಿಷನರಿಗಳ ಬಲವಂತದ ಹಾಗೂ ಆಮಿಷದ ಮತಾಂತರಗಳು ಮುಗ್ಧ ಹಿಂದೂಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಕ್ಕಿಗೆ ಧಕ್ಕೆಯಲ್ಲವೇ?
- ಹಿಂದೂಗಳ ವೈವಾಹಿಕ ವಿಷಯಗಳೂ ಕಾನೂನಿನ ಅಡಿಯಲ್ಲಿ ಬರಬಹುದಾದರೆ ಮುಸ್ಲಿಮನೊಬ್ಬ 4 ಮದುವೆಯಾಗುವುದು ಮತ್ತು ಮನಸ್ಸಿಗೆ ಬಂದಾಗ ಎಲ್ಲೆಂದರಲ್ಲಿ 3ಬಾರಿ ತಲಾಕ್ ಹೇಳಿ ಮದುವೆಯನ್ನು ಅನೂರ್ಜಿತಗೊಳಿಸುವುದು ಕಾನೂನಿನ ವ್ಯಾಪ್ತಿಗೆ ಸೇರದ ವಿಷಯ ಹೇಗೆ?
- ದೇಶದೆಲ್ಲೆಡೆ ಧಾರ್ಮಿಕ ಅಲ್ಪಸಂಖ್ಯಾತರಾಗಿ ಮುಸ್ಲಿಮರು ಗಿಟ್ಟಿಸುವ ಸರ್ಕಾರಿಸೌಲಭ್ಯಗಳು ಜಮ್ಮು-ಕಾಶ್ಮೀರದ ಹಿಂದೂಗಳಿಗಿರದೇ ಹೋಗಿದ್ದು ಸಂವಿಧಾನಾತ್ಮಕ ಸಮಾನತೆಯ ಹಕ್ಕಿಗೆ ಅಪಚಾರವಲ್ಲವೆ?



- ತಲತಲಾಂತರಗಳಿಂದ ಉಳಿಸಿಕೊಂಡು ಬಂದಿರುವ ಧಾರ್ಮಿಕ ನಂಬಿಕೆಗಳನ್ನು ಏಕಮುಖವಾಗಿ ಮೂಢನಂಬಿಕೆ ಎಂದು ಬಿಂಬಿಸಿ ಹಿಂದೂಸಂಪ್ರದಾಯಗಳನ್ನು ಮಾತ್ರ ಹತ್ತಿಕ್ಕುವ ಕಾನೂನುಗಳನ್ನು ಜಾರಿಗೊಳಿಸುವುದು ಹಿಂದೂ ಸ್ವಾತಂತ್ರ್ಯ ವಿರೋಧವಲ್ಲವೇ?
- ತಮ್ಮನ್ನು ತಾವು ವಿಶ್ವ ಭ್ರಾತೃತ್ವದ ಗುತ್ತಿಗೆ ಹಿಡಿದಂತೆ ಆಡುವ, ಮಾನವತಾವಿರೋಧಿ ಭಯೋತ್ಪಾದಕ-ನಕ್ಸಲರಲ್ಲಿಯೂ ಮಾನವಹಕ್ಕುಗಳ ಕಾರುಣ್ಯ ಉಕ್ಕಿಸುವ ಕಮ್ಯುನಿಸ್ಟ್ ಕಾಮ್ರೇಡ್ ಬಳಗಕ್ಕೆ ಯಾವತ್ತಾದರೂ ದೇಶಕಾಯುವ ಸೈನಿಕರ, ಕಸ ಆಯುವವರ, ಸಣ್ಣ ಹಿಡುವಳಿದಾರರ, ನಕ್ಸಲ್ ಪೀಡಿತ ಪ್ರದೇಶಗಳಲ್ಲಿನ ಮಕ್ಕಳಿಗೆ ಶಿಕ್ಷಣ ನೀಡುವ ವನವಾಸಿ ಕಲ್ಯಾಣ ಆಶ್ರಮದ ಏಕಲ್ ವಿದ್ಯಾಲಯದ ಶಿಕ್ಷಕರ ಹಕ್ಕುಗಳ ಕುರಿತಾಗಿ ಮಾತಾಡುವ ಮನಸ್ಸಾಗಿದೆಯೇ?
- ವರ್ಗಸಂಘರ್ಷ, 'ಶೋಷಣೆರಹಿತ ಸಮಾಜ'ದಂತಹ ಅಸಂಬದ್ಧ ಸವಕಲು ನಾಣ್ಯವನ್ನೇ ಸರ್ಕಾರದ ಸಹಾಯದೊಂದಿಗೆ ಶಾಲಾ ಪುಸ್ತಕಗಳಲ್ಲಿಯೂ ತುಂಬಿ ಚಾರಿತ್ರ್ಯ ಬೆಳೆಸಬೇಕಾದ ಮುಗ್ಧ ವಿದ್ಯಾರ್ಥಿಗಳ ದಿಕ್ಕು ತಪ್ಪಿಸುವುದು ದುರುಪಯೋಗ ವಿರೋಧಿ ಹಕ್ಕಿನ ಅತಿಕ್ರಮಣವಲ್ಲದೆ ಮತ್ತೇನು?

## 'ಇಷ್ಟಿ': ಸಂಸ್ಕೃತದ ಮೊದಲ ಸಾಮಾಜಿಕ ಚಲನಚಿತ್ರ



ದಶಕಗಳ ಕಾಲ ಸಂಸ್ಕೃತ ಪಾಠ ಮಾಡಿ ಸಂಸ್ಕೃತ ಪ್ರಾಸಾರ ಮಾಡಿದ ನಿವೃತ್ತ ಪ್ರಾಧ್ಯಾಪಕ ಜಿ. ಪ್ರಭಾ ಅವರು, ಈ ಪ್ರಾಚೀನ ಭಾಷೆಯನ್ನು ಇನ್ನಷ್ಟು ಜನಪ್ರಿಯಗೊಳಿಸುವ ಆಶಯದಿಂದ ಸಂಸ್ಕೃತದಲ್ಲಿ 'ಇಷ್ಟಿ'ಎಂಬ ಚಲನಚಿತ್ರವನ್ನು ನಿರ್ಮಿಸಿದ್ದಾರೆ. ಚೆನ್ನೈನ ಲೊಯೊಲಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರಭಾ ಅವರು, ಈಗಾಗಲೇ ಎರಡು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದ್ದಾರೆ. ಸಂಸ್ಕೃತದಲ್ಲಿ ಈಗಾಗಲೇ ಮೂರು ಚಲನಚಿತ್ರಗಳು ನಿರ್ಮಾಣಗೊಂಡಿದ್ದು, 'ಇಷ್ಟಿ' ನಾಲ್ಕನೆಯದ್ದಾಗಿದೆ. ಆದರೆ ಸಾಮಾಜಿಕ ವಸ್ತುವನ್ನು ಒಳಗೊಂಡ ಮೊದಲ ಚಿತ್ರವಾಗಿದೆ. ಇದಕ್ಕೂ ಮುನ್ನ ಸಂಸ್ಕೃತದಲ್ಲಿ ನಿರ್ಮಿಸಲಾದ ಮೂರು ಚಲನಚಿತ್ರಗಳು ಪೌರಾಣಿಕ ಅಥವಾ ಜೀವನ ಚರಿತ್ರೆಯನ್ನು ಆಧರಿಸಿದ್ದವು. 'ಇಷ್ಟಿ' ಚಿತ್ರವು ಆಧುನಿಕ ಮತ್ತು ಪ್ರಚಲಿತದಲ್ಲಿರುವ ವಸ್ತು ವಿಷಯವನ್ನು ಹೊಂದಿದೆ. ಕೋಲ್ಕತ್ತ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ(ಕೆಐಎಫ್ಎಫ್)ದಲ್ಲಿ ಪ್ರದರ್ಶಿತಗೊಂಡ ಈ ಚಲನಚಿತ್ರ ಗೋವಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ (ಐಎಫ್ಎಫ್ಐ)ದ ಭಾರತೀಯ ಪನೋರಮಾ ವಿಭಾಗದ ಉದ್ಘಾಟನಾ ಚಲನಚಿತ್ರವಾಗಲಿದೆ.

## ಪಠ್ಯರಹಿತ ಶಿಕ್ಷಣದತ್ತ ಫಿನ್ಲಾಂಡ್



ವಿಶ್ವದ ಅತ್ಯಂತ ಉತ್ಕೃಷ್ಟ ಮಟ್ಟದ ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಒಂದೆನಿಸಿರುವ ಫಿನ್ಲಾಂಡ್‌ನ ಶಾಲಾ ಪದ್ಧತಿ ಮತ್ತು ಕಲಿಕಾ ಕ್ರಮ, ಪಠ್ಯರಹಿತ (ನಿರ್ದಿಷ್ಟ ಪಠ್ಯವಿಲ್ಲದ) ವಿದ್ಯಾಭ್ಯಾಸದತ್ತ ಹೊರಳುತ್ತಿದೆ. ಈ ಮೂಲಕ ಫಿನ್ಲಾಂಡ್ ಪಠ್ಯರಹಿತ ಶಿಕ್ಷಣ ನೀಡುವ ಜಗತ್ತಿನ ಮೊಟ್ಟ ಮೊದಲ ರಾಷ್ಟ್ರವೆನಿಸಿದೆ.

ಅತೀ ಹೆಚ್ಚು ಬುದ್ಧಿವಂತ ಹಾಗೂ ವಿಕಸಿತ ವಿದ್ಯಾರ್ಥಿಗಳನ್ನು ರೂಪಿಸುವ ಫಿನ್ಲಾಂಡ್‌ನ ಈ ರೀತಿಯ ಯಶಸ್ಸಿಗೆ ಮುಕ್ತ ಕಲಿಕೆ ಮತ್ತು ವಿದ್ಯಾರ್ಥಿಗಳ ಸಂಪೂರ್ಣ ವ್ಯಕ್ತಿತ್ವ ವಿಕಸನದ ಗುರಿಯಾಗಿಸಿಕೊಂಡ ಅಲ್ಲಿನ ಶೈಕ್ಷಣಿಕ ಧೋರಣೆಯೇ ಕಾರಣ. 2012ರ ತನಕ ವಿಶ್ವದಲ್ಲೇ ಮೊದಲ ಸ್ಥಾನ ಹೊಂದಿದ್ದ ಫಿನಿಷ್ ಶೈಕ್ಷಣಿಕ ವ್ಯವಸ್ಥೆ, ಪ್ರಸ್ತುತ 5ನೇ ಸ್ಥಾನದಲ್ಲಿದೆ. ಫಿನಿಷ್ ಧಾರ್ಮಿಕ ನಂಬಿಕೆಯಂತೆ, ಶಿಕ್ಷಣದ ಮೂಲ ಗುರಿ ಸಮಾಜದಲ್ಲಿ ಸಮಾನತೆ ಮತ್ತು ಎಲ್ಲರಿಗೂ ಸಮನಾದ ಅವಕಾಶ ಸೃಷ್ಟಿ.

ಫಿನ್ಲಾಂಡ್‌ನ ಶಾಲೆಗಳಲ್ಲಿ ಯಾವುದೇ ಶೈಕ್ಷಣಿಕ ಶುಲ್ಕ ಪಡೆಯುವುದಿಲ್ಲ. ಜೊತೆಗೆ ಎಲ್ಲ ವಿದ್ಯಾರ್ಥಿಗಳಿಗೆ ಕಡಿಮೆ ಬೆಲೆಯಲ್ಲಿ ಮಧ್ಯಾಹ್ನದ ಊಟ ನೀಡಲಾಗುತ್ತದೆ. ಅಲ್ಲಿಯ ಕಾನೂನಿನ ಪ್ರಕಾರ 7 ವರ್ಷಕ್ಕಿಂತ ಮೊದಲು ಮಕ್ಕಳನ್ನು ಶಾಲೆಗೇ ಸೇರಿಸುವುದು ಮಕ್ಕಳ ಹಕ್ಕಿನ ಉಲ್ಲಂಘನೆ ಮತ್ತು ಶಿಕ್ಷಾರ್ಹ ಅಪರಾಧ. 7 ರಿಂದ 16 ವರ್ಷದ ವರೆಗಿನ ಶಿಕ್ಷಣ ವೃತ್ತಿಪರ ಕಲಿಕೆಗೆ ಆದ್ಯತೆ ನೀಡಲಾಗುತ್ತದೆ. 16 ವರ್ಷಕ್ಕಿಂದ ಮೊದಲು ಯಾವುದೇ ಪರೀಕ್ಷೆಯಾಗಲೀ, ಮನೆ ಕೆಲಸ (ಹೋಂವರ್ಕ್) ಕೊಡುವ ಪದ್ಧತಿಯಾಗಲಿ ಇಲ್ಲವೇ ಇಲ್ಲ. ಮೊದಲ ಈ 6 ವರ್ಷದ ಕಲಿಕೆಯು ಮಕ್ಕಳನ್ನು ವಿಷಯ ಗ್ರಹಿಕೆಗೆ ಅಣಿಗೊಳಿಸುವುದು ಮತ್ತು ಅವರು ತಮ್ಮ ಅಚ್ಚುಮೆಚ್ಚಿನ ವಿಷಯಗಳನ್ನು ಆಯ್ದುಕೊಳ್ಳುವತ್ತ ಕೇಂದ್ರೀಕೃತವಾಗಿರುತ್ತದೆ. ಇತ್ತೀಚಿಗೆ ವಿಜ್ಞಾನ, ಸಮಾಜ, ಭೂಗೋಳ, ಗಣಿತ ಇತ್ಯಾದಿ ನಿರ್ದಿಷ್ಟ ವಿಷಯಗಳೇ ಇಲ್ಲದ ಕೌಶಲ್ಯವೃದ್ಧಿ ಮತ್ತು ಯೋಚಿಸಿ ಕಲಿಯುವ ವಿಧಾನವನ್ನು ರೂಪಿಸಲಾಗಿದೆ.

ಜಗತ್ತಿನಾದ್ಯಂತ ಬಳಕೆಯಲ್ಲಿರುವ, ನಿರ್ದಿಷ್ಟ ವಿಷಯಗಳು, ಸ್ಪರ್ಧಾತ್ಮಕ ಪರೀಕ್ಷೆ, ಸಮಾನ ಗುಣಮಟ್ಟದ ಶಿಕ್ಷಣ ಪರಿಕರಣೆ ಆಧಾರಿತ ಶಿಕ್ಷಣದ ವಿರುದ್ಧ ದಿಕ್ಕಿನಲ್ಲಿ ಹೊರಟಿರುವ ಫಿನ್ಲಾಂಡ್‌ನ ಶಿಕ್ಷಣ ವ್ಯವಸ್ಥೆ 'ನೋಡಿ ತಿಳಿ, ಮಾಡಿ ಕಲಿ' ವಿಧಾನದ ಮೂಲಕ ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ನಾಂದಿ ಹಾಡುವ ಈ ಪ್ರಯತ್ನ ಭಾರತೀಯ ಗುರುಕುಲ ಆಧಾರಿತ ಶಿಕ್ಷಣ ವ್ಯವಸ್ಥೆಯನ್ನು ನೆನಪಿಸುತ್ತದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-04. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಮೊ: 97312 64009
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.